# ಸ್ವೀಕಾರ

...ಸಾಮಾಜಿಕ ಕಾದಂಬರಿ

■ ವಿವೇಕಾನಂದ ಕಾಮತ್

## ಆತ ಯಾರಿರಬಹುದು?

'ಆತ ಯಾರು ಅಂಕಲ್..?' ಎಂದು ತಡೆಯಲಾರದೆ ಪ್ರಶ್ನಿಸಿದಾಗ ದಂಪತಿ ಪರಸ್ಪರ ಮುಖ ಮುಖ ನೋಡಿಕೊಂಡರು.

ಯಾರೋ ಬಿಡು ಅಪೂರ್ವ..ನಮ್ಗೆ ಸಂಬಂಧಿಸದ ವಿಷಯ..' ರಾಯರು ಮೊಟಕಾಗಿ ಉತ್ತರಿಸಿದಾಗ ವಿಜಯಮ್ಮ ವ್ಯಗ್ರಗೊಂಡರು.

'ಯಾರೋ ಯಾಕೆ..?' ಎಂದು ಏನೋ ಹೇಳ ಹೊರಟ ವಿಜಯಮ್ಮನನ್ನು ರಾಯರು ಕಂಗಳಲ್ಲೇ ಗದರಿ ಮುಂದೆ ಮಾತನಾಡದವರಂತೆ ಸಂಜ್ಞೆ ಮಾಡಿದರು.

'ನನ್ನ ಹೃದಯ ಸುಳ್ಳು ಹೇಳ್ತಿಲ್ಲ..ನನ್ನ ಮನಸ್ಸು ವಂಚನೆ ಮಾಡಲ್ಲ..ಅವ್ನು ಬೇರೆ ಯಾರೋ ಅಲ್ಲಾರೀ..ನಿಮಗ್ಯಾಕೆ ಗೊತ್ತಾಗ್ತಾ ಇಲ್ಲ' ವಿಜಯಮ್ಮ ತಳಮಳಿಸುತ್ತ ನುಡಿದರು. ಮತ್ತೆ ಹಠ ಹಿಡಿದವರಂತೆ, 'ನೀವು ಕಾರು ನಿಲ್ಲಿಸಿ..ನಾನು ಸರಿಯಾಗಿ ನೋಡ್ಕೊಂಡು ಬರ್ತೀನಿ..ನನ್ನನ್ನು ಅವಸರದಿಂದ ಹೀಗೆ ಯಾಕೆ ಎಳ್ಕೊಂಡು ಬಂದ್ರಿ ನೀವು..?'ಆಕ್ಷೇಪಿಸಿದ

